ಪುನಶ್ಚೇತನಗೊಂಡ ಬಗೆಯನ್ನು ಕಳವೆಯವರು ಕೃತಜ್ಞತೆಯಿಂದ ನೆನೆಯುತ್ತಾರೆ. ಇವರು ಕರ್ನಾಟಕದ ಜಲಸಂರಕ್ಷಣೆ ಕುರಿತ ಮಾಹಿತಿ ಕಣಜವೇ ಆಗಿದ್ದಾರೆ. ಅವರ ಅಗಾಧ ಮಾಹಿತಿಯ ಕೆಲವಂಶವನ್ನು ಮಾತ್ರ ಇಲ್ಲಿ ನೀಡಲಾಗಿದೆ.

‘ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸೇವಾಸಂಸ್ಥೆ’ಯ ಮೂಲಕ ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ರಾಜ್ಯಾದ್ಯಂತ ಇದುವರೆಗೆ 425 ಕೆರೆಗಳ ಪುನಶ್ಚೇತನಗೊಂಡಿರುವುದು ಇತಿಹಾಸವನ್ನೇ ಸೃಷ್ಟಿಸಿದೆ. ಕಳವೆಯವರ ಈ ಕುರಿತ ‘ಜಲಗಣಮನ’ ಕೃತಿ, ಈ ಕೆಲಸಗಳ ಕುರಿತ ವಿಸ್ತೃತ ದಾಖಲೆ. ಮಾಜಿ ಸಚಿವರಾದ ಆರ್.ವಿ. ದೇಶಪಾಂಡೆಯವರು ಹಳಿಯಾಳದ ಸುತ್ತಮುತ್ತ 113 ಕೆರೆಗಳ ಹೂಳೆತ್ತಿಸಿ ಜಲಸಂರಕ್ಷಣೆಗೆ ಹೊಸ ಭಾಷ್ಯ ಬರೆದಿದ್ದಾರೆ. ಇನ್ನು ಗವಿಮಠದ ಸ್ವಾಮೀಜಿಯವರ ಜಲಜಾಗೃತಿ ಕಾರ್ಯವಂತೂ ಅತ್ಯಂತ ಶ್ಲಾಘನೀಯ. ಇವರು ಅನೇಕ ಕೆರೆಗಳ ಜೊತೆಗೆ, ತುಂಗಭದ್ರಾ ನದಿಯ ಉಪನದಿಯಾದ ಹಿರೇಹಳ್ಳವೆಂಬ 21 ಕಿ.ಮೀ. ಉದ್ದದ ನದಿಯ ಹೂಳನ್ನು ಆಮೂಲಾಗ್ರವಾಗಿ ತೆಗೆಯಲು ಜನರನ್ನು, ಧನವನ್ನೂ ಸಂಘಟಿಸಿ ತಾವೇ ನೇತೃತ್ವವಹಿಸಿ, ಯಶಸ್ವಿಯಾಗಿದ್ದಾರೆ. ‘ಈ ಬಗೆಯ ಅಪರೂಪದ ಕೆಲಸ ದೇಶದಲ್ಲೇ ಮೊದಲಿನದಾಗಿದೆ’ ಎನ್ನುತ್ತಾರೆ ಕಳವೆಯವರು.

ಗಣಿ ಸಚಿವರಾಗಿದ್ದ ಹಾಲಪ್ಪಾಚಾರ್ ಅವರು ಕೊಪ್ಪಳ, ಯಲಬುರ್ಗಾ ಭಾಗದಲ್ಲಿ ಹಲವಾರು ಬ್ಯಾರೇಜ್‌ಗಳನ್ನು ನಿರ್ಮಿಸಿ ವ್ಯಾಪಕವಾಗಿ ಮಳೆನೀರು ಸಂಗ್ರಹಿಸುತ್ತಿದ್ದಾರೆ. ತನ್ಮೂಲಕ ಸಾವಿರಾರು ರೈತರಿಗೆ ಆಶ್ರಯವಾಗುವ ಅದ್ಭುತ ಕೆಲಸದಲ್ಲಿ ತೊಡಗಿದ್ದಾರೆ. ಚಿತ್ರ ನಟ ಯಶ್ ಅವರು 90 ಎಕರೆ ವಿಸ್ತೀರ್ಣದ ತಲ್ಲೂರು ಕೆರೆಯ, 60 ಎಕರೆಯಷ್ಟು ಹೂಳೆತ್ತಿಸಿ ಪುನಶ್ಚೇತನಗೊಳಿಸಿ ಮಾದರಿಯನ್ನೇ ನಿರ್ಮಿಸಿದ್ದಾರೆ. ಚಿತ್ರನಟ ಪ್ರಕಾಶ್‌ರಾಜ್ ಅವರು ಕೂಡ ಕೆಲವು ಕೆರೆಗಳಲ್ಲಿ ಹೂಳೆತ್ತಿಸಿದ್ದಾರೆ. ರಾಣಿಬೆನ್ನೂರು ತಾಲ್ಲೂಕು ಕಾಕೋಳದ ಚನ್ನಬಸಪ್ಪ ಕಂಬಳಿ, ಗುಡ್ಡದಿಂದ ಹರಿದು ಬರುವ ನೀರನ್ನು ಒಣಗಿ ನಿಂತ ಹಲವು ಬಾವಿ, ಕೆರೆಗಳಿಗೆ ಹರಿಸಿ ಜಲಸಂರಕ್ಷಣೆಯ ಸಾಹಸ ಮಾಡಿದ್ದಾರೆ. ಹಿಂದೆ ಘನಮಠ ಶಿವಯೋಗಿ ಸ್ವಾಮೀಜಿಗಳು ವಚನಗಳ ಮೂಲಕ ಜಲ ಜಾಗೃತಿ ಮೂಡಿಸಿ ಜಲಸಂರಕ್ಷಣೆ ಕಾರ್ಯ ಮಾಡಿದ್ದನ್ನು ಈಗ ರಾಯಚೂರು, ಬಾಗಲಕೋಟೆ ಜಿಲ್ಲೆಗಳಲ್ಲಿ ಮಲ್ಲಣ್ಣ ನಾಗರಾಳ ಮತ್ತವರ ಕುಟುಂಬ ವ್ಯಾಪಕವಾಗಿ ಮಾಡುತ್ತಾ, ಹಲವಾರು ಕೆರೆಗಳಿಗೆ ಮರುಜೀವ ನೀಡಿದ್ದಾರೆ.

ಬೆಳಗಾವಿಯಲ್ಲಿ ಬತ್ತಿದ ಅನೇಕ ಬಾವಿಗಳನ್ನು ಪುನರುಜ್ಜೀವಗೊಳಿಸುವ ಕಾಯಕವನ್ನು ‘ವ್ಯಾಸ’ ಎಂಬ ಸಂಸ್ಥೆ ಕೈಗೊಂಡು ಸ್ತುತ್ಯಾರ್ಹ ಕಾರ್ಯ ಮಾಡುತ್ತಿದೆ. ಕುಷ್ಟಗಿಯ ದೇವೇಂದ್ರಪ್ಪ ಬಳೂಟಗಿಯವರು ಕೂಡ ಆ ಭಾಗದಲ್ಲಿ ನೀರ ನೆಮ್ಮದಿಗಾಗಿ ಹಲವು ಕೆರೆಗಳ ಹೂಳೆತ್ತಿಸಿದ್ದಾರೆ. ಇವರ ಕೆಲಸದಿಂದ ಪ್ರೇರಿತರಾಗಿ ಆ ಭಾಗದ ಕೆಲವು ಪೊಲೀಸ್ ಅಧಿಕಾರಿಗಳೂ ಸಹ ಕೆರೆಗಳನ್ನು ಪುನಶ್ಚೇತನಗೊಳಿಸಿದ್ದಾರೆ. ಶಿವಮೊಗ್ಗ ಜಿಲ್ಲೆ ಸಾಗರದ ನಿಚಡಿಯಲ್ಲಿ 4 ಕೆರೆಗಳ ಪುನಶ್ಚೇತನವಾಗಿದ್ದರೆ, ಹೆಗ್ಗೋಡು ಸುತ್ತಮುತ್ತ ಕೂಡ 3 ಕೆರೆಗಳು ರಂಗಕರ್ಮಿ ಪ್ರಸನ್ನ ಮತ್ತಿತರರ ಮುಂದಾಳತ್ವದಲ್ಲಿ ಹೊಸಜೀವ ಪಡೆದಿವೆ. ಯಲ್ಲಾಪುರದ ಶಿವರಾಮ ಹೆಬ್ಬಾರ್ ಮತ್ತವರ ತಂಡದಿಂದ 4 ಕೆರೆಗಳ ಪುನಶ್ಚೇತನವಾಗಿದೆ. ಗದಗ, ನರೇಗಲ್, ಹಿರೇಕೆರೂರು, ಗಂಗಾವತಿ, ಹುನಗುಂದ, ರಾಯಚೂರು, ಕೊಪ್ಪಳ, ಸೊರಬ ತಾಲ್ಲೂಕಿನ ಜನರಲ್ಲಿ ಜಲಸಂರಕ್ಷಣೆ ಕುರಿತು ವ್ಯಾಪಕ ಜನಜಾಗೃತಿ ಮೂಡಿದ್ದು, ಅನೇಕ ಕೆರೆಗಳನ್ನು 15ರಿಂದ 20 ಅಡಿಗಳಷ್ಟು ಆಳಕ್ಕೆ ಹೂಳೆತ್ತಿ ಪುನರ್ ನಿರ್ಮಾಣ ಮಾಡಲಾಗಿರುವುದು ಗಮನಾರ್ಹ ಸಂಗತಿಯಾಗಿದೆ. ಜೊತೆಗೆ, ‘ಬೈಫ್’ ಸಂಸ್ಥೆಯ ಅಧಿಕಾರಿಗಳ ಶ್ರಮದಿಂದ, 90ರ ದಶಕದಲ್ಲಿ ರೈತರಿಗೆ ಅವಶ್ಯಕವಾದ ನೀರಿನ ಪೂರೈಕೆಗಾಗಿ ತಿಪಟೂರಿನ ಭಾಗದಲ್ಲಿ, ಕಲಘಟಕಿ ತಾಲ್ಲೂಕಿನಲ್ಲಿ ಕೃಷಿಹೊಂಡಗಳ ನಿರ್ಮಾಣ ಮತ್ತದರ ಜಾಲಗಳನ್ನು ರೂಪುಗೊಳಿಸಿದ್ದು ಜಲಸಂರಕ್ಷಣೆಯ ನವ ಮಾದರಿಯನ್ನು ನಿರ್ಮಾಣ ಮಾಡಿದೆ. ಆ ಭಾಗದಲ್ಲೆಲ್ಲಾ ಕೃಷಿಹೊಂಡ, ಇಂಗುಗುಂಡಿ, ಬದು ನಿರ್ಮಾಣ, ಕೆರೆ ಪುನಶ್ಚೇತನ ಕೆಲಸಗಳು ವ್ಯಾಪಕವಾಗಿ ಆಗಿವೆ.



ಹೊನ್ನಾವರದ ಕಲ್ಯಾಣಿಗೆ ಹೊಸ ಜೀವ

‘2016ರಿಂದ ಈಚೆಗೆ ಜಲಸಂರಕ್ಷಣೆಯ ವ್ಯಾಪಕ ಕೆಲಸಗಳು ದೊಡ್ಡಮಟ್ಟದಲ್ಲಿ, ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಆಗಿವೆ. ಆ ಮೂಲಕ ರಾಜ್ಯದ ಜಲಸಂವರ್ಧನೆಯ ಚಿತ್ರ ಕೊಂಚ ಬದಲಾಗಿದೆ. ನಿಸ್ವಾರ್ಥವಾಗಿ ಪಾರಂಪರಿಕ ಜಲಮೂಲಗಳ ಪುನಶ್ಚೇತನದ ಕೆಲಸ ಮಾಡುತ್ತಾ ಹೋದರೆ ರಾಜ್ಯದಲ್ಲಿ ನೀರಿನ ಸಂಗ್ರಹ ಹೆಚ್ಚಿಸಬಹುದು. ತನ್ಮೂಲಕ ಬರ–ನೆರೆಗೆ ಕಡಿವಾಣ ಹಾಕಬಹುದು. ಹೀಗೆ ಜಲಸಂವರ್ಧನೆಯಲ್ಲಿ ಶಾಶ್ವತ ಬದಲಾವಣೆ ಖಂಡಿತ ಸಾಧ್ಯವಿದೆ’ ಎನ್ನುತ್ತಾರೆ ಶಿವಾನಂದ ಕಳವೆಯವರು,

ರಾಜ್ಯಾದ್ಯಂತ ಮಳೆನೀರಿನ ಸಂರಕ್ಷಣೆಗಾಗಿ ಪಾರಂಪರಿಕ ಜಲಮೂಲಗಳನ್ನು ಜನಸಮುದಾಯ ಹೂಳೆತ್ತಿ ಪುನಶ್ಚೇತನಗೊಳಿಸಿಕೊಳ್ಳುವ ಕಾರ್ಯ ಇಷ್ಟೆಲ್ಲಾ ಬಗೆಯಲ್ಲಿ ನಡೆದು ಮಾದರಿಗಳೇ ನಿರ್ಮಾಣವಾಗಿದೆ! ದೊಡ್ಡ ಯೋಜನೆಗಳಿಗೆ ಸರ್ಕಾರದ ಮೂಲಕ ಕೋಟ್ಯಾಂತರ ಹಣ ಸುರಿಯದೇ ಸ್ಥಳೀಯವಾಗಿಯೇ ಜಲಸ್ವಾವಲಂಬನೆ ಸಾಧ್ಯವಾಗುತ್ತದೆ ಎಂದು ನಿರೂಪಿಸಲಾಗಿದೆ. ಹೀಗಾಗಿ ಹಳ್ಳಿ, ನಗರವೆನ್ನದೆ ಎಲ್ಲೆಡೆ ಸದ್ಯ ಉಳಿದಿರುವ ಕೆರೆ, ಕಟ್ಟೆಗಳ ಒತ್ತುವರಿ ತೆರವುಗೊಳಿಸಿ, ಹೂಳೆತ್ತಿ, ಮಳೆ ನೀರು ಹರಿದು ಬರುವ ದಾರಿಗಳನ್ನು ಬಿಡಿಸಿಟ್ಟುಕೊಳ್ಳಬೇಕಿದೆ. ಜೊತೆಗೆ ಪ್ರತಿ ಕಟ್ಟಡಗಳ ಮೇಲೆ ಬೀಳುವ ಮಳೆ ನೀರಿನ ಕೊಯ್ಲು ಹಾಗೂ ಸಂಗ್ರಹಣಾ ವಿಧಾನವನ್ನು ಸಮರ್ಥವಾಗಿ ಅಳವಡಿಸಿಕೊಂಡರೆ ನೀರಿನ ಸಮಸ್ಯೆ ಬಹಳಷ್ಟು ನೀಗಿಹೋಗುತ್ತದೆ!

ಮಳೆ ನೀರಿನೊಂದಿಗೆ, ಬಳಸಿ ಹರಿಯಲು ಬಿಟ್ಟ ಕೊಳೆನೀರು, ಚರಂಡಿ ನೀರಿನ ಸಂಸ್ಕರಣೆ ಮೂಲಕ ಮರುಬಳಕೆಗೆ ನೀರು ಸಿದ್ಧ ಮಾಡಿಟ್ಟುಕೊಳ್ಳುವುದು, ನಗರದ ನೀರಿನ ಸಮಸ್ಯೆಗೆ ಸರಳ, ಸೂಕ್ತ ಹಾಗೂ ಸಮರ್ಥ ಪರಿಹಾರ ಎನ್ನುತ್ತಾರೆ ಜಲತಜ್ಞರು. ಜೊತೆಗೇ ನೀರಿನ ಬಳಕೆ ಕಡಿಮೆ ಇರುವ ಕೃಷಿ ಉತ್ಪನ್ನಗಳನ್ನು ಬೆಳೆಯುವ ಪ್ರಯೋಗಗಳು, ಹನಿ ನೀರಾವರಿ ಮಾದರಿ ಕೂಡ ಹೆಚ್ಚಾಗಬೇಕಿದೆ. ನೀರಿನ ವಿವೇಕಯುತ ಬಳಕೆಯ ಜಾಗೃತಿಗೂ ಹೆಚ್ಚಿನ ಗಮನ ನೀಡಬೇಕಿದೆ. ಜಲಸಂರಕ್ಷಣೆಯ ಈ ಬಗೆಯ ಕೆಲಸಗಳು ಯುದ್ಧೋಪಾದಿಯಲ್ಲಿ, ಸಾಮುದಾಯಿಕವಾಗಿ, ವ್ಯಾಪಕವಾಗಿ ಮತ್ತು ವಿಕೇಂದ್ರೀಕೃತವಾಗಿ ರಾಜ್ಯದ ಪ್ರತಿ ಗ್ರಾಮದಲ್ಲೂ ಸರ್ಕಾರದ ಬೆಂಬಲದೊಂದಿಗೆ ನಡೆದಾಗ, ‘ನೀರ ನೆಮ್ಮದಿ’ ಖಂಡಿತಾ ಸಾಧ್ಯವಾಗುತ್ತದೆ. ಅದಕ್ಕೆ ರಚನಾತ್ಮಕವಾಗಿ ತೊಡಗಿಕೊಳ್ಳುವ ಮನಸು ಮಾಡಬೇಕಷ್ಟೇ. ದಾರಿಗಳು ತಾನಾಗಿಯೇ ತೆರೆದುಕೊಳ್ಳುತ್ತಾ ಹೋಗುತ್ತವೆ!

ಪ್ರತಿಕ್ರಿಯಿಸಿ: feedback@sudha.co.in